| ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಚಿಂತಾಮಣಿ | | | |
|---|---|---|---|
| ಸಿಸಿ ನಂ. 1701/2022 | | | |
| ಸಾಕ್ಷಿದಾರರ ಹೆಸರು | ಶ್ರೀರಾಮರೆಡ್ಡಿ | | |
| ತಂದೆ /ಗಂಡನ ಹೆಸರು | ಚಿಕ್ಕಪ್ಪಯ್ಯ | ಪಿಡಬ್ಲ್ಯೂ | 6 |
| ವಯಸ್ಸು | 54 ವರ್ಷ | ಸಿಡಬ್ಲ್ಯೂ | 7 |
| ಉದ್ಯೋಗ | ಟ್ರಾಫಿಕ್ ಇನ್ಸ್ ಪೆಕ್ಟರ್ ಕೆ ಎಸ್ ಆರ್ ಟಿ ಸಿ | ಪ್ರಮಾಣ ವಚನ | |
| ವಾಸ ಸ್ಥಳ | ಚಿಂತಾಮಣಿ | ಭೋದಿಸಿದ ದಿನಾಂಕ | 20-06-2024 |

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ

ನಾನು 32 ವರ್ಷಗಳಿಂದ ಕೆ ಎಸ್ ಆರ್ ಟಿ ಸಿ ಡಿಪೋದಲ್ಲಿ ಕೆಲಸ ಮಾಡುತ್ತಿದ್ದು ಈಗ ತೋರಿಸುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಪೋಲಿಸರು ಬಸ್ ಅನ್ನು ಹಾಜರುಪಡಿಸುವಂತೆ ಕೋರಿದ್ದು ಆ ಮೇರೆಗೆ ನಾನು ಬಸ್ ಅನ್ನು ಹಾಜರುಪಡಿಸಿರುತ್ತೇನೆ. ಆಗ ಸಮಯ ಸುಮಾರು 4-45 ಗಂಟೆಯಾಗಿರುತ್ತದೆ. ಆಗ ನಾನು ಮತ್ತುಬೈರೆಡ್ಡಿ ರವರು ಇರುತ್ತಾರೆ. ಬಸ್ ನಂ. ಕೆ ಎ 40 ಎಫ್ 1017.

ನಿಪಿ-3 ದಾಖಲೆಯಲ್ಲಿ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸಾಕ್ಷಿಯು ಸಹಿಯನ್ನು ನಿಪಿ 3 ಬಿ ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಆರೋಪಿ ಪರ ಶ್ರೀ ಬಿ ಆರ್ ಡಿ ವಕೀಲರಿಂದಃ

ದಿಃ05-09-22 ರಂದು ನಿಮ್ಮನ್ನು ಪೋಲಿಸರು ಅಮಾತನ್ ಪಂಚನಾಮೆಗೆ ಅಂತ ಕರೆದಿರುವುದಿಲ್ಲ. ನಿಮ್ಮ ಮಜಂದೆ ಪಂಚನಾಮೆ ಬರೆದಿರುತ್ತಾರಾ ಎಂದರೆ

ಬರಳಚ್ಚುಪಡಿಸಿ ಇಟ್ಟುಕೊಂಡಿರುತ್ತಾರೆ. ಅದರಲ್ಲಿ ಏನು ಬರೆದಿರುತ್ತದೆ ಅಂತ ನಿಮಗೆ ಗೊತ್ತಿಲ್ಲ ಎಂದರೆ ಜ್ಞಾಪಕವಿರುವುದಿಲ್ಲ. ಘಟಕ ವ್ಯವಸ್ಥಾಪಕರು ಸಹಿ ಮಾಡಲು ಹೇಳಿದ ಮೇರೆಗೆ ನಾನು ಸಹಿ ಮಾಡಿರುತ್ತೇನೆ. ಕೆ ಎ 40 ಎಫ್ 1017 ವಾಹನ ಅಪಘಾತವಾಗಿರುವುದಿಲ್ಲ ಎಂದರೆ ನಾನು ಸ್ಥಳಕ್ಕೆ ಹೋಗಿರುವುದಿಲ್ಲ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.

# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ . ನ್ಯಾಯಾಲಯ, ಚಿಂತಾಮಣಿ.

ಸಿ. ಸಿ.- 1701/2022 ದಿನಾಂಕಃ 20-06-2024

ಸತ್ಯ ಪ್ರತಿಜ್ಞೆ ಮೇರೆಗೆ ಸಿ.ಡಬ್ಲ್ಯೂ 8 ಪಿ.ಡಬ್ಲ್ಯೂ 7

ಸಾಕ್ಷಿದಾರರ ಹೆಸರು : ಡಾಃ ವಾಣಿ
ತಂದೆಃ ಗಂಡನ ಹೆಸರು ವೇಣು
ವಯಸ್ಸು : 44 ವರ್ಷ
ಉದ್ಯೋಗ : ವೈದ್ಯಾಧಿಕಾರಿಗಳು
ವಿಳಾಸ : ಸಾರ್ವಜನಿಕ ಆಸ್ಪತ್ರೆ ಚಿಂತಾಮಣಿ

ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ. ರವರಿಂದಃ

ನಾನು ಸೆಪ್ಟೆಂಬರ್ 2019 ರಿಂದ ಇಲ್ಲಿಯವರೆಗೆ ಚಿಂತಾಮಣಿಯ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸಿರುತ್ತೇನೆ.

ದಿನಾಂಕಃ 03-09-22 ರಂದದು ಸಂಹೆ 5-26 ಗಂಟೆಗೆ ಚಾಸ-2 ರವರು ಗಜಾನನ ಸರ್ಕಲ್ ನ ರಸ್ತೆಯಲ್ಲಿ ಅಪಘಾತವಾಗಿದ ಹಿನ್ನೆಲೆಯಲ್ಲಿ ಗಾಯಗೊಂಡು ಚಿಕಿತ್ಸೆಗೆ ಬಂದಿದ್ದು ಅವರನ್ನು ಪರೀಕ್ಷಿಸಿ ನೋಡಲಾಗಿ ಅವರಿಗೆ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

1) ಎಡ ಕಾಲಿನ ಮಂಡಿಯ ಕೆಳಗಡೆ ಮೂಳೆ ಮುರಿದ ಗಾಯ,

2. ಎಡ ಕಾಲಿನಲ್ಲಿ ಊತ ಮತ್ತು ನೋವು.

3. ಬಲ ಮುಂಗೈನ ಮೇಲೆ ಗಾಯ ಮತ್ತು ಊತ ನೋವು,

4. ಎಡ ಪಾದದ ಕೆಳಗೆ ಮಧ್ಯದಲ್ಲಿ ಗಾಯ

5. ಎಡ ಪಾದದಲ್ಲಿ ನೋವು ಇದ್ದು ಮೂಳೆ ಮುರಿದಿರುವ ಸಾಧ್ಯತೆ ,

ಅವರಿಗೆ ಚಿಕಿತ್ಸೆಯನ್ನು ಕೊಟ್ಟು ಹೆಚ್ಚಿನ ಚಿಕಿತ್ಸೆಗಾಗಿ ಕಳುಹಿಸಿಕೊಟ್ಟಿರುತ್ತೇವೆ, ಅವರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು ದಿಃ08-10-22 ರಂದು ಮೂಳೆ ಮುರಿತದ ಬಗ್ಗೆ ಸರ್ಜರಿ ಯಾಗಿರುತ್ತದೆ. ದಿಃ29-09-22 ರಂದು ಸರ್ಜರಿ ಆಗಿರುತ್ತದೆ. ಅವರ ಅಭಿಪ್ರಾಯದ ಪ್ರಕಾರ ವರದಿ ನೀಡಿದ್ದು ನನ್ನ ಅಭಿಪ್ರಾಯಾದ ಪ್ರಕಾರ ಎಡ ಕಾಲಿನ ಮಂಡಿ ಮತ್ತು ಮುಂಗೈ ಗೆಆದ ಗಾಯಗಳು ತೀವ್ರ ಸ್ವರೂಪದ ಗಾಯಗಳು ಆಗಿರುತ್ತವೆ. ಸಾಕ್ಷಿಯು ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಅಂತಾ ಹಾಗೂ ಅದರ ಮೇಲಿನ ಸಾಕ್ಷಿಯ ಸಹಿಯನ್ನು ನಿಪಿ-7 ಎ ಮತ್ತು ಬಿ ಅಂತಾ ಗುರುತಿಸಲಾಯಿತು.

ಪಾಟೀ ಸವಾಲುಃ ಶ್ರೀ. ಬಿ ಆರ್ ಡಿ ಆರೋಪಿತರ ಪರ ವಕೀಲರಿಂದ

ಚಿಕಿತ್ಸೆಗಾಗಿ ಚಾಸ-2 ರವರನ್ನು ಬಸ್ ನಲ್ಲಿ ಇದ್ದ ಪ್ರಯಾಣಿಕರು ಮತ್ತು ಅವರ ಸಂಬಂಧಿಕರು ಕರೆದುಕೊಂಡು ಬಂದಿರುತ್ತಾರೆ. ಚಾಸ-2 ರವರು 5-26 ಕ್ಕೆ ಬಂದಿದ್ದು 20 ನಿಮಿಷಗಳ ಕಾಲ ಚಿಕಿತ್ಸೆ ನೀಡಿರುತ್ತೇನೆ. ಎಷ್ಟು ಗಂಟೆಗಳ

ಕಾಲ ಪರೀಕ್ಷೆ ಮಾಡಿರುತ್ತೇನೆ ಎಂಬ ಬಗ್ಗೆ ಗಾಯದ ಪ್ರಮಾಣ ಪತ್ರದಲ್ಲಿ ಬರೆದಿರುವುದಿಲ್ಲ ಬಲವಾದ ಕಲ್ಲಿನಿಂದ ಅಥವಾ ಬಲವಾದ ಕೋಲಿನಿಂದ ಹೊಡೆದಾಗ ಮೂಳೆ ಮುರಿಯುವ ಸಂಭವ ಇರುತ್ತದೆ ಎಂದರೆ ಹೌದು. ಎಡ ಮುಂಗೈನ ಮೇಲೆ ಆದ ಗಾಯವು ಜನಜಂಗುಳಿ ಇರುವ ಪ್ರದೇಶದಲ್ಲಿ ನೂಕು ನುಗ್ಗಲು ಆಗಿ ಬಿದ್ದಾಗ ನೀವು ಹೇಳಿದ ಗಾಯ ಆಗುವ ಸಂಭವ ಇದೆ ಎಂದರೆ ಹೌದು. ದಿಃ08-10-22 ಮತ್ತು ದಿಃ29-09-22 ದಿನಾಂಕಗಳ ದಾಖಲೆಗಳನ್ನು ದೂರುದಾರರು ತಂದು ಕೊಟ್ಟ ದಾಖಲೆಗಳ ಆಧಾರದ ಮೇಲೆ ನಮೂದು ಮಾಡಿರುತ್ತೀರಿ ಎಂದರೆ ಸಾಕ್ಷಿಯು ಪೋಲಿಸರು ವರದಿ ತಂದು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಇದಾದ ನಂತರ ಚಾಸ-2 ರವರು ಪರೀಕ್ಷೆ ಮಾಡಿರುವುದಿಲ್ಲ ಎಂದರೆ ಮಾಡಿರುವುದಿಲ್ಲ. ಚಾಸ-3 ರವರು ನಿಮಗೆ ಚಿರಪರಿಚಿತರಾಗಿದ್ದು ಅವರ ಮಾತಿನ ಆದಾರದ ಮೇಲೆಗೆ ಸುಳ್ಳು ಗಾಯದ ಪ್ರಮಾಣ ಪತ್ರ ನೀಡಿರುತ್ತೀರಿ ಎಂದರೆ ಸರಿಯಲ್ಲ ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದರೂ ಕೂಡ ಅವರ ಮಾತು ಕೇಳಿ ತೀವ್ರ ಸ್ವರೂಪದ ಗಾಯಗಳು ಅಂತ ಪ್ರಮಾಣ ಪತ್ರ ನೀಡಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.